**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 662/2019**

ಸಿ ಡಬ್ಲ್ಯೂ -30

ಪಿ ಡಬ್ಲ್ಯೂ-10

| | | |
|---|---|---|
| **ಸಾಕ್ಷಿದಾರರ ಹೆಸರು** | : | ಎಮ್ ಎನ್ ಮಾಯಣ್ಣನವರ |
| **ತಂದೆ/ಗಂಡನ ಹೆಸರು** | : | ನೇಮಚಂದಪ್ಪ |
| **ವಯಸ್ಸು** | : | 56 ವರ್ಷ |
| **ಉದ್ಯೋಗ** | : | ನಿವೃತ್ತ ಎ ಎಸ್ ಐ |
| **ವಾಸ** | : | ರಾಣೇಬೆನ್ನೂರು |

**ದಿನಾಂಕಃ 25-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು 2018 ಜನೇವರಿ ಯಿಂದ 2019 ಡಿಸೆಂಬರ್ ವರೆಗೆ ರಾಣೇಬೆನ್ನೂರು ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 13-08-2018 ರಂದು ಮಧ್ಯಾಹ್ನ 02.00 ಗಂಟೆಯ ಸಮಯದಲ್ಲಿ ನಾನು ಠಾಣಾಧಿಕಾರಿಯಾಗಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣಾ ಗುನ್ನಾ ನಂ.260/2018 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು ದೂರನ್ನು ಮತ್ತು ಎಫ್ ಐ ಆರ್ ನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ದೂರನ್ನು ಈಗಾಗಲೇ ನಿ ಪಿ -1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿ ಹಾಗೂ ಹಿಂಬರಹವನ್ನು ನಿ ಪಿ -1 ಬಿ ಎಂದು ಗುರುತಿಸಲಾಯಿತು. ಎಫ್ ಐ ಆರ್ ನ್ನು ನಿ ಪಿ -15 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ -15 ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಅಪಘಾತದ ಸ್ಥಳಕ್ಕೆ ಬೇಟಿ ಕೊಟ್ಟು ಪಂಚರ ಸಮಕ್ಷಮ ನಿ ಪಿ -2 ರಂತೆ ಸ್ಥಳ ಮಹಜರ್ ಮಾಡಿರುತ್ತೇನೆ. ಆ ಸಮಯದಲ್ಲಿ ಒಂದು ಚೌಕಾಕಾರದ ಬೀಗವನ್ನು ಅಮಾನತುಪಡಿಸಿಕೊಂಡು ಮಹಜರ್ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ ಪಿ -2 ಬಿ ಎಂದು ಗುರುತಿಸಲಾಯಿತು. ಮಹಜರ

ಸಿ ಡಬ್ಲ್ಯೂ -30

ಪಿ ಡಬ್ಲ್ಯೂ-10

ಸಮಯದಲ್ಲಿ ನಿ ಪಿ -3 ರಿಂದ 6 ರಂತೆ ಘಟನಾ ಸ್ಥಳದ ಪೋಟೋಗಳನ್ನು ತೆಗೆದಿರುತ್ತೇನೆ. ಆ ಬೀಗವನ್ನು ಈಗಾಗಲೇ ಎಮ್ ಒ -1 ಎಂದು ಗುರುತಿಸಲಾಗಿದೆ. ನಂತರ ಸಾಕ್ಷಿದಾರರಾದ ಚಾಸಾ-5 ರಿಂದ ಚಾಸಾ-9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ-31 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರು ಹಾಗೂ ಅವರ ಪರ ವಕೀಲರನ್ನು ಕರೆಸಲಾಯಿತು. ಅವರು ಗೈರುಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.